**<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್. ಸಿ. ನ್ಯಾಯಾಲಯ, ಚಿಂಚೋಳಿ</u>**

**<u>ಎಮ್.ವಿ.ಸಿ. ನಂ. 142/2022</u>**

| | | |
|---|---|---|
| **ಹೆಸರು** | **ಃ** | **ರಾಜಶೇಖರ ರಾಠೋಡ** |
| **ತಂದೆಯ ಹೆಸರು** | **ಃ** | **ಕಾಮಪ್ಪ** |
| **ವಯಸ್ಸು** | **ಃ** | **37 ವರ್ಷ** |
| **ಉದ್ಯೋಗ** | **ಃ** | **ಪಿ.ಎಸ್.ಐ. ಕೊಡೆಕಲ್** |
| **ವಾಸಸ್ಥಳ** | **ಃ** | **ಯಾದಗಿರಿ** |

**<u>ಇಂದು ದಿನಾಂಕ 06-02-2026 ರಂದು ಸಾಕ್ಷಿಯು ದೃಶ್ಯ ವಿದ್ಯುನ್ಮಾನ ಮೂಲಕ ಹಾಜರಾಗಿದ್ದು ಅವರಿಗೆ ಪ್ರಮಾಣ ವಚನವನ್ನು ದೃಶ್ಯ ವಿದ್ಯುನ್ಮಾನ ಮೂಲಕ ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ 2ನೇ ಎದುರುದಾರರ ಪರ ಶ್ರೀ ವಿ.ವಿ.ಸಿ. ವಕೀಲರಿಂದಃ</u>**

ನಾನು 07-10-2019 ರಿಂದ 28-09-2021 ರವರೆಗೆ ಚಿಂಚೋಳಿ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ. ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ನಾನು ಅಪರಾಧ ನಂ. 108/2020 ರಲ್ಲಿ ತನಿಖಾಧಿಕಾರಿಯಾಗಿ ಕೆಲಸ ನಿರ್ವಹಿಸಿರುತ್ತೇನೆ ಎಂದರೆ ಸರಿ. ಘಟನೆ ಆದ ದಿನ 14-08-2020 ಎಂದರೆ ಸರಿ. ದೂರನ್ನು ದಾಖಲಿಸಿದ ದಿನಾಂಕ 25-09-2020 ಎಂದರೆ ಸರಿ. 41 ದಿನಗಳ ವಿಳಂಬವಾಗಿ ದೂರು ದಾಖಲಾಗಿದೆ ಎಂದರೆ ಸರಿ. ಕಾರಣ ಗಾಯಾಳು ಹಲವಾರು ಆಸ್ಪತ್ರೆಗಳಲ್ಲಿ ಒಳರೋಗಿಯಾಗಿ ಚಿಕಿತ್ಸೆ ಪಡೆದ ನಂತರ ದಿನಾಂಕ 25-09-2020 ಠಾಣೆಗೆ ಬಂದು ದೂರನ್ನು ನೀಡಿರುತ್ತಾರೆ. ನಾನು ಅವರು ನೀಡಿದ ದೂರನ್ನು ಹಾಗೂ ದಾಖಲಾತಿಗಳನ್ನು ಪರಿಶೀಲಿಸಿ ಕೇಸನ್ನು ದಾಖಲಿಸಿರುತ್ತೇನೆ. ವೈದಕಿಯ ದಾಖಲಾತಿಗಳನ್ನು ನೋಡಿ ದೂರನ್ನು ದಾಖಲಿಸಿರುತ್ತೇನೆ. ಯಾವುದೇ ಆಸ್ಪತ್ರೆಯಿಂದ ನಮ್ಮ ಠಾಣೆಗೆ ಎಮ್.ಎಲ್.ಸಿ. ವರದಿಯನ್ನು ನೀಡಿರುವುದಿಲ್ಲ. ನಾನು ಗಾಯಾಳು ಚಿಕಿತ್ಸೆ ಪಡೆದ ಆಸ್ಪತ್ರೆಗಳಿಗೆ ಭೇಟಿ ನೀಡಿರುವುದಿಲ್ಲ. ನಾನು ಪರಿಶೀಲಿಸಿದ ವೈದ್ಯಕಿಯ ದಾಖಲಾತಿಗಳಲ್ಲಿ

**ಎಂ.ವಿ.ಸಿ ನಂ. 142/2022**
**ಆರ್. ಡಬ್ಲೂ -2**

ಗಾಯಾಳು ಹಿಂಬದಿ ಸವಾರನಾಗಿ ಅಪಘಾತಕ್ಕಿಡಾದ ಬಗ್ಗೆ ಉಲ್ಲೇಖ ಇದ್ದ ಬಗ್ಗೆ ಪರಿಶೀಲಿಸಿರುವುದಿಲ್ಲ. ನಾನು ಅಪಘಾತವನ್ನು ನೋಡಿದ ಪ್ರತ್ಯಕ್ಷ ಸಾಕ್ಷಿಗಳ ಹೇಳಿಕೆಯನ್ನು ಪಡೆದಿರುವುದಿಲ್ಲ.

**<u>ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ**

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮತ್ತು ಜೆ.ಎಮ್. ಎಫ್. ಸಿ,**
**ಚಿಂಚೋಳಿ.**